# ಮೈಸೂರ ಗೆಜೆಟ್ಟ.

ನಂ. 19 ಸರ್ಕಾರದಿಂದ ಪ್ರಾಯಿಷ್ ಆಲ್ದು. ಸ್ ೧೮೮೭.

ಬೆಂಗಳೂರು, ಶನಿವಾರ, ಮೇ ತಾ|| 14, ಸ್ ೧೮೮೭.


ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಜೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.


1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೆ ಬಕ್‌ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸ್ಮಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಅಕ್ಟುಗಳು ವ ರೆಗ್ಯುಲೇಷನ್‌ಗಳು, ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.


## ೧ನೇ ಭಾಗ.

### ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

### ಜನರಲ್.

### ಇಸ್ತಿಹಾರ್‌ನಾಮೆಗಳು.

ತಾರೀಖು 18ನೇ ಏಪ್ರೀಲ್ 1887.

ಕ್ಯಾಂಪ್ ನಂ. 151.—1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟಿನ 69ನೇ ಸೆಕ್ಷನ್ ಅನುಸರಿಸಿ ಮೈಸೂರು ದೇಶದ ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್‌ಯವರಿಂದ ಮಾಡಲ್ಪಟ್ಟ ರಿಜಿಸ್ಟ್ರೇಷನ್ ರೂಲ್‌ಗಳ 83ನೇ ಕಲಮಿಗೆ ಹೇರಜೇಕಾದ ಯಿದರಡೀ ಕಂಡ ಜಾಸ್ತಿ ಅಂಶಗಳು, ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುತ್ತೆ:—

"83. A. ರಿಜಿಸ್ಟ್ರಾರವರಿಂದ 76ನೇ ಸೆಕ್ಷನ್ ಅನುಸರಿಸಿ IIನೇ ನಂಬರ್ ಬುಕ್ಕಿನಲ್ಲಿ ಪ್ರತಿಮಾಹೆಯಲ್ಲಿ ಮಾಡಲ್ಪಟ್ಟ ಖತಾಯಿತಿಗಳ ನಕಲುಗಳು, ರಿಜಿಸ್ಟ್ರೀ ವ ಸಬ್ ರಿಜಿಸ್ಟ್ರೀ ಆಫೀಸುಗಳ ಮಾಹೇವಾರಿ ಲೆಕ್ಕುಗಳೊಂದಿಗೆ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿಗೆ ಕಳುಹಿಸಲ್ಪಡತಕ್ಕದ್ದು."

ತಾರೀಖು 17ನೇ ಏಪ್ರೆಲ್ 1887.

ಕ್ಯಾಂಪ್ ನಂ. 126.—ಬೆಂಗಳೂರು ಡಿಸ್ಟ್ರಿಕ್ಟ್ ಹೊಸಕೋಟೆ ತಾಲ್ಲೂಕಿನ ಇದರೀ ಕಂಡ ಗ್ರಾಮಗಳ ವರ್ಗಾ ವರ್ಗಿಗಳು ಹುಕ್ಕುಂ ಮಾಡಲ್ಪಟ್ಟಿರುತ್ತವೆ:—

| ಎರಡನೇ ಮದ್ದಿನಲ್ಲಿ ಕಂಡ ಗ್ರಾಮಗಳು ಯಾವದಕ್ಕೆ ಸೇರಿರುತವೋ ಆ ಜೋಬಿ ಹೆಸರು. | ಬೇಚಿರಾಕ್ ಗ್ರಾಮಗಳ ಹೆಸರುಗಳು. | 2ನೇ ಮದ್ದಿನಲ್ಲಿ ಕಂಡ ಬೇಚಿರಾಕ್ ಗ್ರಾಮಗಳು ವರ್ಗಮಾಡಲ್ಪಡುವ ಹೋಬಿ ಹೆಸರು. |
|---|---|---|
| 1 | 2 | 3 |
| ಸೂಲಿಬೆಲೆ .. | 1 ಜೋಡಿ ಶಿವದೇನಹಳ್ಳಿ<br>2 ಸರಕಾರಿ ಸೊಂಣಹಳ್ಳೀಪುರ | ಹೊಸಕೋಟೆ ಕಸಬಾ. |
| ವಾಗಟ .. | 1 ಕೊಟ್ಟೂರು | |
| ಕಾಡಗೋಡಿ .. | 1 ಸರಕಾರಿ ಚಿಕ್ಕಗಟ್ಟಿಗೇನಹಳ್ಳಿ<br>2 „ ದೊಡ್ಡಗಟ್ಟಿಗೇನಹಳ್ಳಿ<br>3 „ ಗುಟ್ಟಹಳ್ಳಿ | |
| ಹಲ್ಲೂರು .. | 1 ಯಲಚನಾಯಕನಪುರ | |
| ಹಲ್ಲೂರು .. | 1 ಹರಳೂರು<br>2 ಸೋಲೂರು<br>3 ಆಲಗೊಂಡಹಳ್ಳಿ<br>4 ದೊಡ್ಡೇನಹಳ್ಳಿ<br>5 ಯಲಚಮಾನಹಳ್ಳಿ | ವಾಗಟ. |
| ಮುಗಲೂರು .. | 1 ದೊಡ್ಡದಾಸರಹಳ್ಳಿ | |
| ಹೊಸಕೋಟೆ .. | 1 ಅರಳೇಮಾಕನಹಳ್ಳಿ | |
| ಗುಬ್ಬಿ .. | 1 ಜೋಡಿ ವೀರನಹಳ್ಳಿ<br>2 ಕುರುಡಸೋಮೇನಹಳ್ಳಿ | ಕಾಡಗೋಡಿ. |
| ಹೊಸಕೋಟೆ .. | 1 ಸರಕಾರಿ ಅತ್ತಿಬೆಲೆ<br>2 ಯಂತೆಗುಂಡಿ | ಸೂಲಿಬೆಲೆ |
| ಸೂಲಿಬೆಲೆ .. | 1 ಕಾಯಂಗುತ್ತಾ ಕಾರಹಳ್ಳಿ<br>2 „ ಯಶವಂತಪುರ<br>3 „ ಇಟ್ಟಸಂದ್ರ<br>4 ಸರಕಾರಿ ಜಿಮ್ಮಸಂದ್ರ<br>5 ಜೋಡಿ ಶ್ರೀನಿವಾಸಪುರ | ನಂದಗುಡಿ |
| ಸೂಲಿಬೆಲೆ .. | 1 ಜೋಡಿ ಚೋಳಪ್ಪನಹಳ್ಳಿ<br>2 „ ದಾಸರಹಳ್ಳಿ<br>3 ಕಾಯಂಗುತ್ತಾ ದಾಸರತಿಮ್ಮನಹಳ್ಳಿ | ಹುಲ್ಲೂರು. |

| ಯರಡನೇ ಮದ್ದಿನಲ್ಲಿ ಕಂಡ ಗ್ರಾಮಗಳು ಯಾವದಕ್ಕೆ ಶೇರಿರುತವೋ ಆ ಹೋಬಳಿ ಹೆಸರು. | ಬೇಚಿರಾಕ ಗ್ರಾಮಗಳ ಹೆಸರುಗಳು. | | 2ನೇ ಮದ್ದಿನಲ್ಲಿ ಕಂಡ ಬೇಚಿರಾಕ ಗ್ರಾಮಗಳು ವರ್ಗಮಾಡಲ್ಪಡುವ ಹೋಬಳಿ ಹೆಸರು. |
|---|---|---|---|
| 1 | 2 | | 3 |
| ಹೊಸಕೋಟೆ .. | 1 | ಚಿಕ್ಕಹುಲ್ಲೂರು .. | |
| ನಂದಗುಡಿ .. | 1 | ಮಂಚಪ್ಪನಹಳ್ಳಿ .. | |
| | 2 | ಬನಮಾಕನಹಳ್ಳಿ .. | |
| | 3 | ಗಂಗಾಪುರ .. | |
| | 4 | ವೆಂಕಟಾಪುರ .. | |
| | 5 | ಗೋಣಿಹಳ್ಳಿ .. | ಹುಲ್ಲೂರು. |
| | 6 | ಮಾರೇನಹಳ್ಳಿ .. | |
| ವಾಗಟ .. | 1 | ನಿಡಗಟ್ಟ .. | |
| | 2 | ಅತ್ತಿವಟ್ಟ .. | |
| | 3 | ದೊಡ್ಡನಳ್ಳಿಳ .. | |
| ಕಾಡಗೋಡಿ .. | 1 | ತಟ್ಟನೂರು .. | |
| | 2 | ದೇಕಪಾಂಡೆಗುಟ್ಟಹಳ್ಳಿ .. | |
| ವಾಗಟ .. | 1 | ಜೋಡಿ ಮುತ್ತುಕಾಡಹಳ್ಳಿ .. | |
| | 2 | ಡಿಟೋ ಬ್ಯಾಲಹಳ್ಳಿ .. | |
| | 3 | ಡಿಟೋ ಮುತಕೂರು .. | ಮುಗಲೂರು. |
| | 4 | ಡಿಟೋ ಕಲ್ಕುಂಟೆ .. | |
| | 5 | ಸರ್ವಮಾನ್ಯ ನಾಮಿನಕೆರೆ .. | |
| | 6 | ಕಾಯಂಗುತ್ತಾ ಬಸವಟ್ಟನಹಳ್ಳಿ .. | |
| | 7 | ಸರಕಾರಿ ಹಂದನಹಳ್ಳಿ .. | |
| | 8 | ಡಿಟೋ ಬಾನರಹಳ್ಳಿ .. | |
| | 9 | ಡಿಟೋ ದೇವಲಪುರ .. | |

ತಾರೀಖು 5ನೇ ಮೇ 1887.

ನಂ 10.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀಮಾಡಲ್ಪಟ್ಟಿರುವ ಈಕೆಳಗೆಕಂಡ ಜೋಡೀ ಗ್ರಾಮವು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಬೆಳ್ಗ್ಯೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಪಿಪ್ರ್ಯಟ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ ಕ್ರಯದ ಮೊಬಲಗ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇವೀಲ್ ಸಂದಾಯದ ಬಾಕೀ ನೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುವ್ಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಜಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಅತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಅತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಬಳಪಟ್ಟು ಯಿರುತ್ತೆ.

| ಡಿಸ್ಟ್ರಿಕ್ಟು. ತಾಲ್ಲೂಕು. ಹೋಬಳಿ. | ಗ್ರಾಮ. | ಜೋಡೀದಾರರ ಹೆಸರು. | ಅಂದಾಜಾ ಬೀಜವರೀ. | ಅಂದಾಜಾ ಹುರಕಾರಕ್ಕೆ ಕೊಟ್ಟುವಳೀ ಯಾಡಬೇಕಾದ ಪೈಬೇರೀಜು. ಟರೆಂಟ್. | ಸಾಲಿಯಾನಾ ಸರಕಾರದ ಕಂದಾಯ ಬಾಕೀ. | ಯಾವಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯ ಬಾಕೀ. | ಹರಾಜು ತಾರೀಖು ವಗೈರೆ. |
|---|---|---|---|---|---|---|---|
| ಸೆಷ್ಟ್ರಿಕ್ಟು. ಲಿಕ್ಕಿ ತಾಲ್ಲೂಕು. ಸಂತೆಮಾಚಹಳ್ಳಿ. | ಕಾಯಿಗೋನಹಳ್ಳಿ | ಸುಬ್ಬಾಶಾಸ್ತ್ರಿ ಇತರ 21ಮಂದಿ | ಯ. ಗುಂ. ಗ. 33 11 6 | ರೂ. ಆ. ಪೈ. 263 10 10 | ರೂ. ಆ. ಪೈ. 248 0 0 | ರೂ. ಆ. ಪೈ. 267 15 2 | ಮುಂದಿನ ತಿಂಗಳು ತಾರೀಖು 15ರಲ್ಲು ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರ ರೂಬರು. |
| | | | | | | ಮತ್ತು ಹರಾಜ್ ತಾರೀಖು ವರಿಗಿನಬಡ್ಡಿ ಸಹಾ. | |

ತಾರೀಖು 29ನೇ ಏಪ್ರೆಲ್ 1887.

ಕ್ಯಾಂಪ್ ನಂ. 246.—ಬೆಂಗಳೂರು ಟರ್ಬ್ ಮಾಜಿಸ್ಟ್ರೇಟ್ ಮೆ|| ಈ. ಸಿ. ಷಣ್ಮುಗವೇಲು ಪಿಳ್ಳೆಯವರಿಗೆ, 1887ನೇ ಇಸವಿ ಮೇ 2ನೇ ಮಂಗಳವಾರ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು 20 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಬೆಂಗಳೂರು ಡಿಸ್ಟ್ರಿಕ್ಟು 1ನೇ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಸೈಯ್ಯದ್ ನಸಿರುದ್ದೀಯವರು, ಮೆ|| ಷಣ್ಮುಗವೇಲುಪಿಳ್ಳೆ ಯವರು ರಜಾದ ಮೇಲೆ ಯಿರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಟರ್ಬ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 29ನೇ ಏಪ್ರೆಲ್ 1887.

ಕ್ಯಾಂಪ್ ನಂ. 248.—ಕುಂಚಿ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಗುಲಾಂ ಅಹಮದ್‌ಖಾರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೆಡಿಕಲ್ ಸರಟಿಫಿಕೇಟ್ ಮೇಲೆ ಮೂರು ತಿಂಗಳು ರಜಾ ಕೊಡಲ್ಪಟ್ಟಿರುತ್ತೆ.

ಶಿವಮೊಗ್ಗ ಡೆಪ್ಯುಟಿ ಕಮ್ಮಿಷನರ್ ಆಫೀಸ್ ರೆವಿನ್ಯೂ ಹೆಡ್ ಮುನಷಿ ರಾಮಚಂದ್ರರಾಯರಿಗೆ, ಗುಲಾಂ ಅಹಮ್ಮದ್‌ಖಾರ್ ರಜಾ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಕುಂಚಿ ಡೆಪ್ಯುಟಿ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 250.—ದಿವಾನರವರ ಅಂಡರ್ ಸೆಕ್ರಿಟೇರಿಯವರು, ಮೆ॥ ರಂಗಸ್ವಾಮಯ್ಯಂಗಾರ್ರವರು ರಜಾದ ಮೇಲಿರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಸ್ಟ್ಯಾಂಪ್ ಇಲಾಖೆ ಚಾರ್ಜ್ ವಹಿಸಿರತಕ್ಕದ್ದು.

---

ತಾರೀಖು 11ನೇ ಮೇ 1887.

ನಂ. 11.—ದಿವಾನರವರ 1884ನೇ ಇಸವಿ ಡಿಸಂಬರ್ 6ನೇ ಮಕ್ತುಂ 5063—107ನೇ ನಂಬರ್ ಪ್ರೊಸೀಡಿಂಗ್ಸಿನ ಪರತ್ತುಗಳನುಸರಿಸಿ ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ ಯಂ. ರಾಮಚಂದ್ರರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಬಂದು ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 12.—ಮೆ॥ ಸಿ. ಮಾದಯ್ಯನವರು ಮೈಸೂರು ಟರ್ಬಮಾಜಿಸ್ಟ್ರೇಟ್ ಕೋರ್ಟು ವ ಸದರೀ ಮ್ಯುನಿಸಿಪಾಲಿಟಿಯ ಚಾರ್ಜ್‌ನ್ನು ಮಾಹೆ ಮಜಕೂರು 4ನೇ ಮಕ್ತುಮಿನ ಮಧ್ಯಾನ್ಹದಲ್ಲಿ ಮೆ॥ ಅಬ್ದುಲ್‌ರಹಿಮ್ಮಾಯವರಿಗೆ ಒಪ್ಪಿಸಿರುತ್ತಾರೆ.

ಹುಕ್ಕುಂ ಬಮೋಜೀಬ್,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಿಟೇರಿ.